೧೮) ಆಸ್ತಿಗಳನ್ನು ರಿಜಿಸ್ಟರ್ ಮಾಡುವಾಗ ಭೂಮಿಯ ಯೋಗ್ಯತೆಯ ಆಧಾರದ ಮೇಲೆ ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಫೀ ಗೊತ್ತು ಮಾಡುವುದರ ಬಗ್ಗೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಆಸ್ತಿಗಳು ರಿಜಿಸ್ಟರ್ ಮಾಡುವ ವೇಳೆಯಲ್ಲಿ, ಒಂದು ಗ್ರಾಮದ ಒಂದು ಸರ್ವೆ ನಂಬರಿನಲ್ಲಿ ಮತ್ತು ಒಂದು ಗ್ರಾಮದಲ್ಲಿರುವ ಅನೇಕ ಸರ್ವೆ ನಂಬರುಗಳಲ್ಲಿ ಒಂದೇ ತರಹದ ಭೂಮಿ ಇಲ್ಲದೆ ಅತ್ಯಂತ ಹೆಚ್ಚು ಬೆಲೆ ಬಾಳುವ ತರಿ, ಬಾಗಾಯಿತು ಹೆಚ್ಚು ಬೆಲೆಯ ಖುಷ್ಕಿ ಭೂ ಭಾಗಗಳು ಸಹ ಇರುತ್ತವೆ. ಈ ರೀತಿ ಇರುವಾಗ. ಸಬ್ ರಿಜಿಸ್ಟ್ರಾರ್ ಆಫೀಸಿಗೆ ಒಂದು ಖುಷ್ಕಿ ಭೂಮಿ ರಿಜಿಸ್ಟ್ರೇಷನ್‌ಗೆ ಹೋದಾಗ, ಎಲ್ಲಾ ವಿಧದ ಜಮೀನುಗಳಿಗೂ ಆವರೇಜ್ ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಫೀ ತೆರಬೇಕಾಗಿದೆ. ಆದ್ದರಿಂದ. ರೈತ ತಾನು ನಿಜವಾಗಿ ನಾಲ್ಕು ಸಾವಿರ ರೂ. ಗೆ ಕೊಂಡ ಆಸ್ತಿಗೆ, ಆವರೇಜಾಗಿ ರಿಜಿಸ್ಟ್ರಾರ್ ಹೇಳುವ ೧೦ ಸಾವಿರ ರೂ. ಗಳಿಗೆ ಸ್ಟ್ಯಾಂಪ್ ಪೇಪರ್ ಮತ್ತು ರಿಜಿಸ್ಟ್ರೇಷನ್ ಫೀ ತೆರಬೇಕಾಗಿದೆ, ಈ ಪದ್ಧತಿಯಿಂದ ರಿಜಿಸ್ಟ್ರೇಷನ್ ಮಾಡಿಸುವ ರೈತ ತಾನು ನಿಜವಾಗಿ ಕೊಂಡ ಬೆಲೆಗಿಂತ ಹೆಚ್ಚಿನ ಸ್ಟ್ಯಾಂಪು, ರಿಜಿಸ್ಟ್ರೇಷನ್ ಫೀ ತೆರಬೇಕಾಗಿದೆ. ಇದನ್ನು ತಪ್ಪಿಸಿ, ಜಮೀನುಗಳ ತರಹವಾರಿಯ ಆಧಾರದ ಮೇಲೆ. ಭೂಮಿಯ ಯೋಗ್ಯತೆ ಆಧಾರದ ಮೇಲೆ ಸ್ಟ್ಯಾಂಪು ಮತ್ತು ರಿಜಿಸ್ಟ್ರೇಷನ್ ಫೀ ತೆಗೆದುಕೊಳ್ಳುವ ಪದ್ಧತಿಯನ್ನು ಜಾರಿಗೆ ತರಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ರಾಜ್ಯದಲ್ಲಿ ಒಂದು ಗ್ರಾಮದ ಅನೇಕ ಸರ್ವೆ ನಂಬರ್‌ಗಳಲ್ಲಿ ವಿವಿಧ ರೀತಿಯ ಅತ್ಯಂತ ಬೆಲೆ ಬಾಳುವ ತರಿ, ಬಾಗಾಯ್ತು, ಖುಷ್ಕಿ, ಭೂ ಭಾಗಗಳು ಇದ್ದರೂ ಸಹ ಅವುಗಳನ್ನು ನೋಂದಣಿ ಮಾಡಿಸಲು ಉಪ ನೋಂದಣಾಧಿಕಾರಿಗಳ ಕಛೇರಿಗೆ ಹೋದಾಗ ಅವರು ಎಲ್ಲಾ ವಿಧದ ಜಮೀನುಗಳಿಗೂ ಆವರೇಜ್ (ಸರಾಸರಿ) ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಫೀಗಳನ್ನು ತರಬೇಕಾಗುತ್ತದೆಂದು ಸೂಚಿಸಿ ಇದರಿಂದಾಗಿ ರೈತರು ತಾವು ಕೊಂಡು ಕೊಳ್ಳುವ ಆಸ್ತಿಗೆ ಹೆಚ್ಚಿನ ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಫೀ ತೆರಬೇಕಾಗುತ್ತದೆಂದು ಸೂಚಿಸಿರುತ್ತಾರೆ. ಇದನ್ನು ತಪ್ಪಿಸಲು ಭೂಮಿಗಳ ತರಹಾವರಿಯ ಆಧಾರದ ಮೇಲೂ ಹಾಗೂ ಅದರ ಯೋಗ್ಯತೆಯ ಆಧಾರದ ಮೇಲೂ ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಫೀ ತೆಗೆದುಕೊಳ್ಳುವ ಪದ್ಧತಿಯನ್ನು ಜಾರಿಗೆ ತರಲು ವಿನಂತಿಸಿರುತ್ತಾರೆ.

ಈಗಾಗಲೇ, ನೋಂದಣಿ ಮತ್ತು ಮುದ್ರಾಂಕ ಶುಲ್ಕಗಳನ್ನು, ಭೂಮಿಯ ಮೌಲ್ಯದ ಆಧಾರದ ಮೇಲೆಯೇ ತೆರಬೇಕಾಗಿರುವುದರಿಂದ, ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

೪) ಸೂರತ್ಕಲ್ ಇಂಜಿನಿಯರಿಂಗ್ ಕಾಲೇಜಿಗೆ ಈಜು ಕೊಳದ ಕೆಲಸಕ್ಕೆ ಹಣವನ್ನೊದಗಿಸುವುದರ ಬಗ್ಗೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ೧೯೮೪ರಲ್ಲಿ ಸುರತ್ಕಲ್‌ನ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ರಜತ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸುವ ಸಂದರ್ಭದಲ್ಲಿ ೮ ಲಕ್ಷ ರೂ. ಗಳ ಅಂದಾಜಿನಲ್ಲಿ ಕಾಲೇಜಿಗೆ ಒಂದು ಈಜು ಕೊಳವನ್ನು ಮಂಜೂರು ಮಾಡಲಾಗಿದೆಯೆಂದು ಸ್ವಯಂ ಇಚ್ಛೆಯಿಂದ ಘೋಷಿಸಿದ್ದು ಈ ವಿಷಯ ಸ್ಥಳೀಯ ಪತ್ರಿಕೆಗಳಲ್ಲೂ ಪ್ರಕಟವಾಗಿದ್ದಿತು. ಆದರೆ ಈವರೆಗೂ ಯಾವ ಕ್ರಮವನ್ನು ಕೈಕೊಂಡಂತೆ ಕಂಡುಬರುವುದಿಲ್ಲ. ಅಲ್ಲದೆ ಮಾನ್ಯ ಮುಖ್ಯ ಮಂತ್ರಿಗಳೇ ಹಣಕಾಸಿನ ಇಲಾಖೆಯನ್ನು ತಾವೇ ಇಟ್ಟುಕೊಂಡಿರುವುದರಿಂದಲೂ ಈಗಾಗಲೇ ಎರೂವರೆ ವಿದ್ಯಾರ್ಥಿಗಳು ಸಮುದ್ರದಲ್ಲಿ ಈಜಲು ಹೋಗಿ ಮೂವರು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿರುವುದರಿಂದಲೂ ಈಜುಕೊಳದ ನಿರ್ಮಾಣದ ಬಗ್ಗೆ ಕೂಡಲೇ ಕ್ರಮ ಕೈಕೊಂಡು ಅದಕ್ಕೆ ಬೇಕಾದ ಹಣವನ್ನು ಒದಗಿಸಿ ಕೆಲಸವನ್ನು ಪೂರೈಸಿ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಈ ವರ್ಷ ಅಲ್ಲಿಗೆ ಹಣ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.